Reg No B G 155 14-2-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಚರುಕಿ ವೀರಪ್ಪೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಲಾಹೋರಿನಲ್ಲಿ ಅಯ್ಯೂಬರ ವಿರುದ್ಧ ಪ್ರದರ್ಶನ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ಸೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನರಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಆನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಆರಾಂ— ಪಹಬಾದ್ ಜಿಲ್ಲೆಯ ಸಹರ್ ಕ್ಷೇತ್ರದ ನಂ. 105 ನೇ ನುತ್ತದಾನ ಪೆಟ್ಟಿಗೆಯಲ್ಲಿ ಒಂದು ವೋಟೂ ಹಾಕಿರಲಿಲ್ಲ—ಹೀರೋ ಕ್ಷೇತ್ರದ ಒಂದು ಪೆಟ್ಟಿಗೆಯಲ್ಲಿನ ವೋಟು ಕಾಗದದ ಮೇಲೆ 'ಎಲ್ಲರೂ ಕಳ್ಳರು" ಎಂದು ಬರೆದಿತ್ತು.

★

ದಾವಣಗೆರೆ— ನೇತ್ರದಾನಿ ಪದ್ಮಭೂಷಣ ಡಾ|| ಎಂ ಸಿ ಮೋದಿಯವರು ಸಿರ್ಸಿ (ಉತ್ತರ ಕರ್ನಾಟಕ) ಯಲ್ಲಿ ತಾ|| 18 ರಂದು ಉಚಿತ ನೇತ್ರ ಆಪರೇಷನ್ ಕ್ಯಾಂಪ್ ನಡೆಸುವರು.

●

ಮೈಸೂರು— ಭಾರತ-ರಷ್ಯಾ ಸಾಂಸ್ಕೃತಿಕ ಸಂಘದವರು, ರಷ್ಯಾ ದಾಸನ ಸಭಾಧ್ಯಕ್ಷ ಮಿಷ್ಪ್ರಿರಿಡೊನೋಗೆ ಟೌನ್ ಹಾಲ್‌ನಲ್ಲಿ ನಾಳೆ ಸಂಜೆ 6 30 ಕ್ಕೆ ಸ್ವಾಗತ ಸಮಾರಂಭ ಏರ್ಪಡಿಸಿರುವರು

ಬೆಂಗಳೂರು— ಕೈಗಾರಿಕೆಗಳನ್ನು ಬೆಂಗಳೂರಿನಲ್ಲೇ ಕೇಂದ್ರೀಕರಿಸದೆ, ರಾಜ್ಯದ ಎಲ್ಲ ಭಾಗಗಳಲ್ಲೂ ಹರಡಬೇಕೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ ಪಾಟೀಲರು ಯುನೈಟೆಡ್ ಫೈನಾನ್ಸ್ ಕಾರ್ಪೊರೇಷನ್ನನ್ನು ಉದ್ಘಾಟಿಸುತ್ತಾ ಹೇಳಿದರು — ಅಧ್ಯಕ್ಷತೆ ವಹಿಸಿದ್ದ ಎಂ ಪಿ ಸಿ ಅಧ್ಯಕ್ಷರು ಪ್ರಾ|| ನಾಗಪ್ಪ ಆಳ್ವಾರರು ದೇಶದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ವಿಕೇಂದ್ರೀಕರಿಸಬೇಕೆಂದು ಹೇಳಿದರು.

○

ಗುಡಿಬಂಡೆ— ಗುಂಡಲುಕೊತ್ತೂರಿನಲ್ಲಿ ಸ್ಕೂಲಿನ ಹೊರಗೆ ಜೂ ಜಾಡುತ್ತಿದ್ದ ವಿದ್ಯಾರ್ಥಿಯನ್ನು ಹೊಡೆದ ಉಪಾಧ್ಯಾಯನನ್ನು ಹುಡುಗನ ತಂದೆತಾಯಿಗಳು ಥಳಿಸಿದರು.

●

ಲಾಹೋರು— ಪ್ರಜಾರಾಜ್ಯ ಪುನರ್ನಿರ್ಮಾಣಕ್ಕೆ ಮತ್ತು ವಿದ್ಯಾರ್ಥಿಗಳ ಕೇಳಿಕೆ ನೆರವೇರಲು ಒತ್ತಾಯ ಮಾಡುವುದಕ್ಕಾಗಿ ವಿದ್ಯಾರ್ಥಿನಿಯರು ಭಾರಿ ಸೆರವಣಿಗೆ ನಡೆಸಿದರು.

ಕರಾಚಿ— ನಿನ್ನೆ ಲಾಹೋರಿನಲ್ಲಿ ಗೌರ್ನರು ನಿವಾಸೂಲ್ಲಿದ್ದ "ಅಧ್ಯಕ್ಷ ಅಯೂಬರ ಮುಂದೆ ಪ್ರದರ್ಶನ ನಡೆಸಲು ಪ್ರಯತ್ನಿಸಿದ ವಿದ್ಯಾರ್ಥಿಗಳು ಮತ್ತು ಕಾರ್ಮಿಕರನ್ನು ಚದುರಿಸಲು ಸೈನ್ಯ ಮತ್ತು ಭಾರಿ ಪೋಲೀಸು ತಂಡ ಕರೆಸಲಾಗಿತ್ತು.

★

ಲೂಧಿಯಾನ— ಗಾಗ್ರಾಂ ಚುನಾವಣೆ ನಂತರ, ಮತ್ತೊಂದು ವಿರುದ್ಧ ಪಾರ್ಟಿಗಳ ಆದ ಘರ್ಷಣೆಯಲ್ಲಿ ಒಬ್ಬನ್ನು ಗುಂಡುಹಾರಿಸಿದನೆಂದು ವರದಿಯಾಗಿದೆ — ಗಲಭೆಯಲ್ಲಿ 40 ಮಂದಿ ಗಾಯಗೊಂಡರೆಂದು ವರದಿಯಾಗಿದೆ — ಸರ್ಕಾರದ ದಬ್ಬಾಳಿಕೆ ಪ್ರತಿಭಟಿಸಿ ಡೆಕ್ಕಾದ ನಾಲ್ಕು ಮಂದಿ ಪಾರ್ಲಿಮೆಂಟು ಸದಸ್ಯರು ರಾಜೀನಾಮೆ ಕೊಟ್ಟಿದ್ದಾರೆ.

★

ಕೋಲಾರ— ಮುಳಬಾಗಲಿನಲ್ಲಿ ಕಾಲರಾ ಹರಡುತ್ತಿದೆ ; ಹೋಟಲುಗಳನ್ನೆಲ್ಲಾ ಮುಚ್ಚಲೂ, ಆವನಿ ಗ್ರಾಮದಲ್ಲಿ ನಡೆಸಲೇರ್ಪಡಿಸಿದ್ದ ಸಂತೆಯನ್ನು ನಿಲ್ಲಿಸಲೂ ಜಿಲ್ಲಾ ಮಾಜಿಸ್ಟ್ರೇಟರ ಆಜ್ಞೆಯಾಗಿದೆ.

Mysore Government Electric Factory

MYSORE ROAD, BANGALORE-2.

.... Established in 1934 ....

Manufacturers and distributors of

1. Power Transformers
2. Transmission Line Tower
3. Scientific Surveying Instruments
4. Plastic Industrial Articles and
5. Street Light Fittings

ಜಗದ್ರಕ್ಷಣೆಗಾಗಿ ಕಾಲಕೂಟ ಕುಡಿದ ಮಹಾದೇವನ ಪ್ರಾರ್ಥನೆಯ ದಿನ

ಮ ಹಾ ಶಿ ವ ರಾ ತ್ರಿ

ಶಿವನ ಪ್ರೀತ್ಯರ್ಥ ಆಚರಿಸುವ ಅಸಂಖ್ಯಾತ ಹಬ್ಬ ಹರಿದಿನಗಳಲ್ಲಿ "ಮಹಾಶಿವರಾತ್ರಿ" ಅತ್ಯಂತ ಪ್ರಮುಖವಾದುದು. ಸಾಮಾನ್ಯವಾಗಿ ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿಯಂದು ಬೀಳುವುದಾದ್ದರಿಂದ, ಈ ವರ್ಷ ಫೆ 15 ರಂದು ಆಚರಿಸಲ್ಪಡುತ್ತದೆ. ಜಾತಿಮತ ಭೇದಗಳಿಂದ ದೂರವಾಗಿ ಸಂಪೂರ್ಣವಾಗಿ ಧಾರ್ಮಿಕ ಹಿನ್ನೆಲೆಯನ್ನೇ ಉಳ್ಳ ಉತ್ಸವವಿದು. ಸಾರ್ವತ್ರಿಕವಾಗಿ ಎಲ್ಲಾ ಹಿಂದೂಗಳಿಂದ ಅತ್ಯಂತ ಭಕ್ತಿಪೂರ್ವಕವಾಗಿ ಆಚರಿಸಲ್ಪಡುತ್ತದೆ.

ಭಾಷಾವೈವಿಧ್ಯದ ಅಡ್ಡಗೋಡೆಗಳಿಂದ ಮುಕ್ತವಾದ ಈ ಹಬ್ಬದ ದಿನದಂದು ತಮಿಳರು, ಆಂಧ್ರರು, ಕನ್ನಡಿಗರು, ಮಲಯಾಳಿಗರು, ಮರಾಠಿಗರು ಮುಂತಾದ ವಿಭಿನ್ನ ಭಾಷೆಗಳಿಗೆ ಸೇರಿದ ಎಲ್ಲಾ ಜನರೂ ಪರಮೇಶ್ವರನಿಗೆ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ. ಸರಳ ಹಾಗೂ ಮುಗ್ಧ ಸಡಗರದಿಂದೊಪ್ಪುವ ಈ ಹಬ್ಬದಂದು ಆಡಂಬರಕ್ಕೆ, ಐಶ್ವರ್ಯಕ್ಕೆ ಅಥವಾ ಭೂರಿ ಭೋಜನಗಳಿಗೆ ಅವಕಾಶವಿಲ್ಲ. ಬೀದಿಯಿಂದ ಬದುಕುವ ಅತ್ಯಂತ ದೀನಸ್ಥಿತಿಯ ಭಿಕ್ಷುಕನಿಂದ ಮೊದಲ್ಗೊಂಡು ಭವ್ಯ ಅರಮನೆಯ ನಿವಾಸಿ ಸಿರಿವಂತ ರಾಜನವರೆಗೆ, ಪ್ರತಿಯೊಬ್ಬರೂ ಪರಮೇಶ್ವರನನ್ನು ಒಂದೇ ಪೂಜಿಸುತ್ತಾರೆ. ಇದರಿಂದ ಭಕ್ತರೆಲ್ಲಿ ಭಗವಂತನನ್ನೆ ಕುರಿತಾದ ನೈಜ

ಭಕ್ತಿಯ ಜ್ಞಾನ ಸ್ಫುರಣಗೊಳ್ಳುತ್ತದೆ ಮತ್ತು ವ್ಯಕ್ತಿಗಳ ಆತ್ಮೋನ್ನತಿಯ ಮಾರ್ಗದಲ್ಲಿ ಕುಗ್ಗದ ಭರವಸೆ ಮೂಡುತ್ತದೆ.

ಪುರಾಣದಂತೆ ದೇವಾಸುರರು ಅಮೃತ ಪಡೆಯಲು ಕ್ಷೀರಸಾಗರ ಮಂಥನದಲ್ಲಿ ತೊಡಗಿದಾಗ ಉತ್ಪನ್ನವಾದ ವಿವಿಧ ವಸ್ತುಗಳಲ್ಲಿ ಕಾರ್ಕೋಟಕ ವಿಷವೂ ಒಂದು. ಅದರ ತೀಕ್ಷ್ಣ ವಾಸನೆಯು ದೇವಾಸುರರನ್ನೂ ಉಸುರುಗಟ್ಟಿಸಿತು ; ಸುಟ್ಟು ಭಸ್ಮವಾಗುವ ಪರಿಸ್ಥಿತಿಯೊದಗಿತು. ದೇವಾನುದೇವತೆಗಳನ್ನೆಲ್ಲಾ ಪ್ರಾರ್ಥಿಸಿದರೂ ಪ್ರಯೋಜನವಾಗಲಿಲ್ಲ.

ಕೊನೆಗೆ ಶಿವನನ್ನು ಮರೆಹೊಕ್ಕರು. ಪರಮೇಶ್ವರನು ಪ್ರತ್ಯಕ್ಷನಾಗಿ ಆ ಭೀಕರ ವಿಷವನ್ನು ಸಂಪೂರ್ಣವಾಗಿ ಪಾನಗೈದ. ಗಂಟಲು ಉರಿಯ ತೊಡಗಿತು. ಆತನ ಸುಂದರ ಕಪ ಕಪ್ಪಬಣ್ಣಕ್ಕೆ ತಿರುಗಿತು. ತಕ್ಷಣವೇ ಪಾರ್ವತೀದೇವಿಯು ಪತಿಯ ಕೊರಳ ಸುತ್ತ ತನ್ನ ಕೈಗಳಿಂದ ಅದುಮಿ ಹಿಡಿದುಕೊಳ್ಳಲು ವಿಷದ ಕೆಳಮುಖ ಧಾರೆ ತಡೆದು ಕೊರಳಲ್ಲೇ ನಿಂತಿತು. ತಮಗಾಗಿ ತೀವ್ರ ಯಾತನೆಯನ್ನು ಸಹಿಸಲು ಸಿದ್ಧನಾದ ಪರಮೇಶ್ವರನಿಗೆ ಸುರರು ಅತ್ಯಂತ ಶ್ರದ್ಧಾಪೂರ್ಣ ಪ್ರಾರ್ಥನೆ ಸಲ್ಲಿಸತೊಡಗಿದರು. ಅದರ ಪ್ರತಿಧ್ವನಿ ಭೂಲೋಕದ ಭಕ್ತರ ಕಿವಿಗಳಲ್ಲೂ ಶುಭಸೂಚಕವೆಂಬಂತೆ ಮೊರೆಯತೊಡಗಿತು. ಅಂದಿನ ರಾತ್ರಿ ಯಾರಿಗೂ ಎಳ್ಳಷ್ಟೂ ನಿದ್ರೆ ತಾಗಲಿಲ್ಲ. ಶ್ರದ್ಧೆ ಮತ್ತು ನಿಷ್ಠೆಯಿಂದೊಡಗೂಡಿದ ಭಕ್ತಿಯಲ್ಲಿ ಎಲ್ಲರೂ ನಿದ್ರೆಯನು ಮರೆತರು. ಆ ದಿನವೇ ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿ ದಿನ– ಮಹಾ ಶಿವರಾತ್ರಿ.

ಅಂದು ಮೊದಲ್ಗೊಂಡು ಇಂದಿನವರೆಗೆ ಹಿಂದೂಗಳು ಪರಮೇಶ್ವರನ ಪ್ರೀತ್ಯರ್ಥವಾಗಿ ಈ 'ಮಹಾಶಿವರಾತ್ರಿ' ಯನ್ನು ಧಾರ್ಮಿಕ ಹಬ್ಬವಾಗಿ ಅತ್ಯಂತ ಭಕ್ತಿಯಿಂದ ಆಚರಿಸುತ್ತಾ ಬಂದಿದ್ದಾರೆ. [ಲೇಕಾ]

———

ಮೈಸೂರು— ಗಾಂಧಿನಗರದ ಶಿವಶರಣ ಸಂಘದವರು ಶ್ರೀಮದ್ರಂಭಾಪುರಿ ಮಹಾಪೀಠದ ಶಾಖೆಯ ಉಳಿಂಗಪೆದ್ದಯ್ಯ ಮಠಾಧೀಶರಾದ ಶ್ರೀ ಶಿವೈಕ್ಯರಾದ ಶಿವಯೋಗಿಸ್ವಾಮಿಗಳ ಗದ್ದಿಗೆಯಲ್ಲಿ ಶ್ರೀ ಮಹಾದೇವಸ್ವಾಮಿಗಳ ಅಧ್ಯಕ್ಷತೆಯಲ್ಲಿ ಶಿವರಾತ್ರಿ ಆಚರಿಸುವರು.

All India Blind Welfare Week

(Shivo-Chaturdasi Week)

16 th February — 22 nd February 1969

FLAG AY on 21 st February 1969

— HEL THE HELPLESS BLIND —

Sponsored by :

Netaji Eye & General Hospital

P. O. Ramachandrapur Ashram, Dist. Purulia (W. B)

Protect the Cow

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳಿಗಾಗಿ ಮೊದಲು ಕರೆಯಿರಿ

ವುಡ್‌ಲ್ಯಾಂಡ್ಸ್ ಜಯಪ್ರದ 2ನೇ ವಾರ

.... ಮನಮೋಹಕ ಹಿಂದಿ ಚಿತ್ರ ....

ದಿವಾನ DIWANA

ಹಾಸ್ಯಶಿಖಾಮಣಿ ರಾಜ್ ಕಪೂರ್, ಸೌಂದರ್ಯರಾಣಿ ಸೈರಾಬಾನು ಅಭಿನಯದ

ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಚಿತ್ರ

ಸಂಗೀತ– ಶಂಕರ್ ಜೈಕಿಷನ್ ಡೈರೆಕ್ಷನ್– ಮಹೇಶ್ ಕೌಲ್

[ದಿನ 3 ಪ್ರದರ್ಶನಗಳು]

ಆಪೆರಾ— ಜನಪ್ರಿಯ 4 ನೇ ವಾರ

— ಅತ್ಯಮೋಘ ತಮಿಳು ಚಿತ್ರ —

ಒಳಿವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi Sri Opera Talkies, Padmabhushana Dr. M.C Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes

It is well known that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmapracharc Nitate M S Krishna Rao (Proprietor) at the Satyavad Press Chamarajapuram, Mysoe 4